**<u>ಹೆಚ್ಚುವರಿ ಸಿವಿಲ್ ಜಡ್ಜ್ ಮತ್ತು ಜೆಎಂಎಫ್ ಸಿ ರವರ ನ್ಯಾಯಾಲಯ, ಕೆ.ಆರ್ ನಗರ</u>**

**<u>ಸಿ.ಸಿ. ನಂ.587/2020</u>**

**ಫಿರ್ಯಾದಿಃ** ಸಾಲಿಗ್ರಾಮ ಪೊಲೀಸರು

**ವಿರುದ್ಧ**

**ಆರೋಪಿತರುಃ**

ಮಹೇಶ ಬಿನ್ ರಾಮಯ್ಯ, 32 ವರ್ಷ,
ವಾಸಃ ನರಚನಹಳ್ಳಿ ಗ್ರಾಮ, ಕೆ ಆರ್ ನಗರ ತಾಲ್ಲೂಕು,
ಮೈಸೂರು ಜಿಲ್ಲೆ.

**ದೋಷಾರೋಪಣೆ**

**ಶ್ರೀಮತಿ ಗಾಯತ್ರಿ, ಬಿ.ಕಾಂ., ಎಲ್.ಎಲ್.ಎಂ. ಹೆಚ್ಚುವರಿ** ಸಿವಿಲ್ ನ್ಯಾಯಾಧೀಶರು ಮತ್ತು ಹೆಚ್ಚುವರಿ ನ್ಯಾಯಿಕ ದಂಡಾಧಿಕಾರಿ ನ್ಯಾಯಾಧೀಶರು, ಕೆ.ಆರ್.ನಗರ, ಆದ ನಾನು ಮೇಲ್ಕಂಡ ಆರೋಪಿಯಾದ ನಿಮ್ಮ ಮೇಲೆ ಈ ಕೆಳಗಿನಂತೆ ಆರೋಪಿಸುವುದೇನೆಂದರೆಃ

ಮೊದಲನೆಯದಾಗಿ ದಿನಾಂಕಃ 23.12.2019 ರಂದು ಸಂಜೆ 4.30 ಗಂಟೆ ಸಮಯದಲ್ಲಿ ಸಾಲಿಗ್ರಾಮ ಪೊಲೀಸ್ ಠಾಣೆಯ ಸರಹದ್ದು ನರಚನಹಳ್ಳಿ ಗ್ರಾಮದ ಚಾಸಾ-1 ಮತ್ತು ಆರೋಪಿಯಾದ ನಿಮ್ಮ ಮನೆಯ ಮಧ್ಯದಲ್ಲಿನ ಖಾಲಿ ಜಾಗದಲ್ಲಿ ಆರೋಪಿಯಾದ ನೀವು ಹುಲ್ಲಿನ ಮೆದೆಯನ್ನು ಹಾಕಿದ್ದು ಚಾಸಾ-1 ರವರು ಯಾಕೆ ನೀನು ನಮ್ಮ ಜಾಗದಲ್ಲಿ ಹುಲ್ಲನ್ನು ತಂದು ಹಾಕಿದ್ದೀಯಾ ಎಂದು ಕೇಳಿದಕ್ಕೆ ಏಕಾಏಕಿ ಅವರ ಮೇಲೆ ಜಗಳ ತೆಗೆದು ಕಲ್ಲಿನಿಂದ ಚಾಸಾ-1 ರವರ ತಲೆಗೆ ಹೊಡೆದು ಸಾಮಾನ್ಯ ಸ್ವರೂಪದ ಗಾಯವುಂಟು ಮಾಡುವುದರ ಮೂಲಕ ಭಾ.ದಂ.ಸಂ.ಕಲಂ.324 ರಡಿಯಲ್ಲಿ ಈ ನ್ಯಾಯಾಲಯದ ಸಂಜ್ಞೆಯೊಳಗೆ ಶಿಕ್ಷಾರ್ಹ ಅಪರಾಧವನ್ನು ಎಸಗಿರುತ್ತೀರಿ.

ಸದರಿ ಮೇಲಿನ ಆರೋಪದ ಬಗ್ಗೆ ನಿಮ್ಮನ್ನು ಈ ನ್ಯಾಯಾಲಯದಲ್ಲಿ ವಿಚಾರಣೆಗೆ ಗುರಿಪಡಿಸಿರುತ್ತೇನೆ.

**<u>ಆಪಾದನೆ</u>**

ಪ್ರಶ್ನೆ-1 ಈಗ ನಿಮಗೆ ಓದಿ ಹೇಳಲಾದ ಆಪಾದನೆ ತಿಳಿಯಿತೇ?

ಉತ್ತರಃ  ಆರೋಪಿ

ಪ್ರಶ್ನೆ-2 ಮೇಲ್ಕಂಡ ಆರೋಪವನ್ನು ಒಪ್ಪಿಕೊಳ್ಳುವಿರೋ ಅಥವಾ ವಿಚಾರಣೆಯಾಗಬೇಕೆ?

ಉತ್ತರಃ  ಆರೋಪಿ

ಮೇಲ್ಕಂಡ ಆಪಾದನೆಯನ್ನು ಆರೋಪಿಗೆ ಓದಿ ಹೇಳಿದ್ದು ಅವರು ಉತ್ತರಿಸಿದಂತೆಯೇ ತೆರೆದ ನ್ಯಾಯಾಲಯದಲ್ಲಿ ಬರೆದುಕೊಂಡಿದ್ದು ಆರೋಪಿಗಳು ನೀಡಿರುವ ಉತ್ತರವು ಸಂಪೂರ್ಣ ಹಾಗೂ ಸರಿಯಾದ ಮಾಹಿತಿ ಒಳಗೊಂಡಿದೆ ಎಂದು ನಾನು ಈ ಮೂಲಕ ದೃಢೀಕರಿಸುತ್ತೇನೆ.

(ಗಾಯತ್ರಿ)
ಹೆಚ್ಚುವರಿ ಸಿವಿಲ್ ಮತ್ತು ನ್ಯಾಯಿಕ ದಂಡಾಧಿಕಾರಿಗಳು,
ಕೆ.ಆರ್.ನಗರ.

ಆರೋಪಿತರ ಸಹಿಃ

ದಿನಾಂಕಃ 09.02.2023